KABK700001692026

**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ., ನ್ಯಾಯಾಲಯ, ಜಮಖಂಡಿ.</u>**

**<u>ಉಪಸ್ಥಿತರು</u>**

**ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್.ಸಿ, ಎಲ್.ಎಲ್.ಬಿ.,**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ., ಜಮಖಂಡಿ.

**<u>ಸಿ.ಸಿ. ನಂ.62/2026</u>**

**<u>ದಿನಾಂಕಃ 2ನೇ ಜುಲೈ 2026</u>**

**ಫಿರ್ಯಾದಿ :** ರಾಜ್ಯದ ಪರವಾಗಿ ಜಮಖಂಡಿ ಶಹರ ಪೊಲೀಸರು.

**(ಪ್ರತಿನಿಧಿಸುವವರು : ಸಹಾಯಕ ಸರ್ಕಾರಿ ಅಭಿಯೋಜಕರು)**

**-ವಿರುದ್ಧ -**

**ಆರೋಪಿ/ತರು :**

**1.** ನರೇಂದ್ರ ತಂದೆ ಪರಸಮಲ್ ಜೈನ್, ವಯಸ್ಸು : 52 ವರ್ಷ, ಉದ್ಯೋಗ : ವ್ಯಾಪಾರ, ಸಾ: ಜಮಖಂಡಿ, ತಾ: ಜಮಖಂಡಿ. ಜಿ: ಬಾಗಲಕೋಟೆ.

**(ಪ್ರತಿನಿಧಿಸುವವರು : ಶ್ರೀ.ವಿ.ಎಂ.ಕೆ, ವಕೀಲರು)**

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 15.05.2025 |
| 2 | ಅಪರಾಧ ವರದಿಯಾದ ದಿನಾಂಕ | 15.05.2025 |
| 3 | ಫಿರ್ಯಾದಿಯ ಹೆಸರು | ಶ್ರೀಮತಿ ದೀಪಾಲಿ ನರೇಂದ್ರ ಜೈನ |
| 4 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 02.07.2026 |
| 5 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 02.07.2026 |
| 6 | ಆರೋಪಿಸಲಾದ ಅಪರಾಧಗಳು | ಭಾರತೀಯ ನ್ಯಾಯ ಸಂಹಿತೆ ಕಲಂ.115(2), 118(1), 133, 351(1), 351(2), 352. |
| 7 | ನ್ಯಾಯಾಧೀಶರ ಅಭಿಪ್ರಾಯ | ಆರೋಪಿತ ನಿರಪರಾಧಿ |

VAIDYA SHREEKANT

Digitally signed by VAIDYA SHREEKANT
Date: 2026.07.02 17:29:02 +0530

**-: ತೀರ್ಪು :-**

ಆರೋಪಿತನ ವಿರುದ್ಧ ಜಮಖಂಡಿ ಶಹರ ಪೊಲೀಸರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ ಆರೋಪಿತನು ಭಾರತೀಯ ನ್ಯಾಯ ಸಂಹಿತೆ ಕಲಂ.115(2), 118(1), 133, 351(1), 351(2), 352 ರಡಿಯಲ್ಲಿ ಅಪರಾಧವೆಸಗಿದ್ದಾನೆಂದು ಆರೋಪಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-**

ಚಾಸಾ-1 ಮತ್ತು ಆರೋಪಿಯು ಗಂಡ ಹೆಂಡತಿ ಇದ್ದು, ಸುಮಾರು 3 ವರ್ಷಗಳಿಂದ ಚಾಸಾ-1 ಮತ್ತು ಆರೋಪಿಯ ನಡುವೆ ಕೌಟುಂಬಿಕ ವ್ಯಾಜ್ಯಗಳು ಇದ್ದುದ್ದರಿಂದ, ಅವರಿಬ್ಬರೂ ಬೇರೆ ಇದ್ದು ದಿನಾಂಕ 15.05.2025 ರಂದು ಬೆಳಿಗ್ಗೆ 7.30 ಗಂಟೆಗೆ ಜಮಖಂಡಿ ನಗರದ ಪನಾಳಕರ ಗಲ್ಲಿಯಲ್ಲಿರುವ ಮುಕೇಶ ಪಾರಸಮಲ ಜೈನ ಇವರ ಮಾಲಿಕತ್ವದ ಸಿ.ಟಿ.ಎಸ್ ನಂ.1380/ಬಿ ನೇದ್ದರಲ್ಲಿರುವ ಮನೆಯಲ್ಲಿ, ಸದರಿ ದಿನಾಂಕದಂದು ಚಾಸಾ-1ರವರು ಕ್ರಿ.ಮಿ.ಸಂಖ್ಯೆ 128/2024ನೇದ್ದರಲ್ಲಿ ಸಾಕ್ಷಿ ಹೇಳಲು ಜಮಖಂಡಿಗೆ ಬಂದು ತನ್ನ ಗಂಡನ ಮನೆಗೆ ಹೋಗಿ ತನ್ನ ಆಧಾರ ಕಾರ್ಡ ತೆಗೆದುಕೊಂಡು ಬಂದು ತನ್ನ ಎರಡು ಹೆಣ್ಣುಮಕ್ಕಳಿಗೆ ನೋಡಿಕೊಂಡು ಬರಲು ಹೋದಾಗ, ಆರೋಪಿಯು ತನಗೆ ಸನ್-2024ನೇ ಸಾಲಿನಲ್ಲಿ ಮಾನ್ಯ ನ್ಯಾಯಾಲಯವು ಪ್ರತಿ ತಿಂಗಳಿಗೆ 2,000/- ರೂಪಾಯಿ ಜೀವನಾಂಶ ಕೊಡಬೇಕು ಅಂತಾ ಆದೇಶ ಮಾಡಿದರು ಸಹ ಯಾಕೆ ಕೊಡತಾ ಇಲ್ಲಾ ಅಂತಾ ಆರೋಪಿಗೆ ಕೇಳಿದ್ದಕ್ಕೆ ಆರೋಪಿಯು ಚಾಸಾ-1ರವರ ಮೇಲೆ ಸಿಟ್ಟಾಗಿದ್ದು ಇರುತ್ತದೆ.

**3.** ಮುಂದುವರೆದು ಚಾಸಾ-1ರವರಿಗೆ ಆರೋಪಿಯು ಸರಿಯಾಗಿ ಬಾಳ್ವೆ ಮಾಡದೆ ಮನೆಬಿಟ್ಟು ಎಲ್ಲಿಯೋ ಹೋಗಿ, ಇಲ್ಲ ಸಲ್ಲದ ಸುಳ್ಳು ಹೇಳಿ ತಮ್ಮ ಮನೆ ಜನರ ಮೇಲೆ ಕೇಸ ಮಾಡಿ ಮತ್ತೆ ತಮ್ಮ ಮನಿಗೆ ಹಣ ಕೇಳಲು ಬಂದಿಯಾ ಅಂತಾ ಅವಾಚ್ಯವಾಗಿ ಬೈಯ್ದು, ಕಾಲಿನಿಂದ ಹೊಟ್ಟೆಗೆ ಒದ್ದು, ಕೈಯಿಂದ ಹೊಡೆ-ಬಡಿ ಮಾಡಿ ಚಾಸಾ-1 ರವರ ಕೈಬಳೆಗಳನ್ನು ಒಡೆದು, ಕೈಗಳಿಗೆ ತೆರಚಿ ಸಾಧಾ ಗಾಯ ಪಡಿಸಿ, ಇನ್ನೊಂದು ಸಾರಿ ತಮ್ಮ ಮನೆಗೆ ಬಂದರೆ ಜೀವ ಸಹಿತ ಬಿಡುವದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿದ್ದು ಇರುತ್ತದೆ. ಆದ್ದರಿಂದ ಆರೋಪಿಯು ಮೇಲ್ಕಾಣಿಸಿದ ಅಪರಾಧಗಳನ್ನು ಮಾಡಿರುತ್ತಾರೆಂದು ಆರೋಪಿಸಲಾಗಿದೆ.

**4**. ಆರೋಪಿತನ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿದ ನಂತರ, ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿತನು ನ್ಯಾಯಾಲಯದ ಜಾಮೀನಿನ ಮೇಲೆ

VAIDYA SHREEKANT Digitally signed by VAIDYA SHREEKANT Date: 2026.07.02 17:29:10 +0530

ಬಿಡುಗಡೆಯಾಗಿದ್ದು, ಆರೋಪಿತನಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.230ರ ಅಡಿಯಲ್ಲಿ ದೋಷಾರೋಪಣ ಪತ್ರದ ನಕಲನ್ನು ಪೂರೈಸಲಾಯಿತು. ತದನಂತರ ಆರೋಪಿತನ ವಿರುದ್ಧ ಆಪಾದನೆಯನ್ನು ರಚಿಸಿ ಆತನಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿತನು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

**5**. ಆರೋಪಿತನ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣ ಪತ್ರದಲ್ಲಿ ಒಟ್ಟು 8 ಜನ ಸಾಕ್ಷಿದಾರರನ್ನು ತೋರಿಸಲಾಗಿದ್ದು, ಅದರಲ್ಲಿ ಫಿರ್ಯಾದುದಾರರಾದ ಪ್ರಾಸಾ.1 ರವರನ್ನು ವಿಚಾರಣೆ ಮಾಡಿ ನಿಪಿ.1 ರಿಂದ 4 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಅಭಿಯೋಜನೆಗೆ ಯಾವುದೇ ಪ್ರಯೋಜನವಾಗದಿರುವುದನ್ನು ಮನಗಂಡು ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಟ್ಟು ಅಭಿಯೋಜನೆ ಪರ ವಿಚಾರಣೆ ಮುಕ್ತಾಯಗೊಳಿಸಲಾಗಿರುತ್ತದೆ.

**6.** ಆರೋಪಿತನ ವಿರುದ್ಧದ ಆರೋಪಗಳನ್ನು ರುಜುವಾತುಪಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯಾಧಾರಗಳು ಈ ಪ್ರಕರಣದಲ್ಲಿ ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ.313ರ ಅಡಿಯಲ್ಲಿ ಆರೋಪಿತನ ವಿರುದ್ಧದ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಗಿದೆ. ಆರೋಪಿತನು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.481 ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾನೆ.

**7**. ಉಭಯ ಪಕ್ಷಗಳ ವಾದ ವಿವಾದಗಳನ್ನು ಕೇಳಲಾಯಿತು.

**8**. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆಃ-

**ಅಂಶಗಳು**

**1.** ದಿನಾಂಕ 15.05.2025 ರಂದು ಬೆಳಿಗ್ಗೆ 7.30 ಗಂಟೆಗೆ ಜಮಖಂಡಿ ನಗರದ ಪನಾಳಕರ ಗಲ್ಲಿಯಲ್ಲಿರುವ ಮುಕೇಶ ಪಾರಸಮಲ ಜೈನ್ ಇವರ ಮಾಲಿಕತ್ವದ ಸಿ.ಟಿ.ಎಸ್.ನಂ.1380/ಬಿ ನೇದ್ದರಲ್ಲಿರುವ ಮನೆಯಲ್ಲಿ, ಚಾಸಾ-1 ಮತ್ತು ಆರೋಪಿಯು ಗಂಡ ಹೆಂಡತಿ ಇದ್ದು, ಸುಮಾರು 3 ವರ್ಷಗಳಿಂದ ಚಾಸಾ-1 ಮತ್ತು ಆರೋಪಿಯ

VAIDYA SHREEKANT
Digitally signed by VAIDYA SHREEKANT
Date: 2026.07.02 17:29:17 +0530

ನಡುವೆ ಕೌಟುಂಬಿಕ ವ್ಯಾಜ್ಯಗಳಿದ್ದುದ್ದರಿಂದ ಅವರಿಬ್ಬರೂ ಬೇರೆ ಬೇರೆ ಇದ್ದು, ಸದರಿ ದಿನಾಂಕದಂದು ಚಾಸಾ-1ರವರು ತನ್ನ ಗಂಡನಾದ ಆರೋಪಿಯ ಮನೆಗೆ ತನ್ನ ಆಧಾರ ಕಾರ್ಡ ಹಾಗೂ ಮಕ್ಕಳಿಗೆ ನೋಡಿಕೊಂಡು ಬರಬೇಕೆಂದು ಆತನ ಮನೆಗೆ ಹೋದಾಗ, ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಹೊಡೆದು ಕಾಲಿನಿಂದ ಹೊಟ್ಟೆಗೆ ಒದ್ದು ಗಾಯವನ್ನುಂಟು ಮಾಡಿದ್ದು, ಆದ್ದರಿಂದ ಆರೋಪಿತನು **ಭಾರತೀಯ ನ್ಯಾಯ ಸಂಹಿತೆ ಕಲಂ.115(2)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**2.** ಮೇಲೆ ಹೇಳಿದಂತೆ ಆರೋಪಿಯು ಚಾಸಾ-1 ರವರ ಕೈಗಳಿಗೆ ತೆರಚಿ ಸಾಧಾ ಗಾಯಪಡಿಸಿದ್ದರಿಂದ, ಆರೋಪಿತನು **ಭಾರತೀಯ ನ್ಯಾಯ ಸಂಹಿತೆ ಕಲಂ.118(1)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**3.** ಮೇಲೆ ಹೇಳಿದಂತೆ ಆರೋಪಿಯು ಚಾಸಾ-1 ರವರಿಗೆ ಉದ್ದೇಶಪೂರ್ವಕವಾಗಿ ಅವಮಾನಪಡಿಸಿದ್ದರಿಂದ, ಆರೋಪಿತನು **ಭಾರತೀಯ ನ್ಯಾಯ ಸಂಹಿತೆ ಕಲಂ.133** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**4.** ಮೇಲೆ ಹೇಳಿದಂತೆ ಆರೋಪಿಯು ಚಾಸಾ-1 ರವರಿಗೆ ದೈಹಿಕ ಹಿಂಸೆ ನೀಡಿ ಕೈಗಳಿಗೆ ತೆರಚಿ ಉದ್ದೇಶಪೂರ್ವಕವಾಗಿ ಅವಮಾನಪಡಿಸಿದ್ದು, ಆದ್ದರಿಂದ ಆರೋಪಿತನು **ಭಾರತೀಯ ನ್ಯಾಯ ಸಂಹಿತೆ ಕಲಂ.351(1)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**5.** ಮೇಲೆ ಹೇಳಿದಂತೆ ಆರೋಪಿಯು ಚಾಸಾ-1 ರವರನ್ನು ಅವಮಾನಿಸುವ ಉದ್ದೇಶದಿಂದ "ನೀನು ಸರಿಯಾಗಿ ಬಾಳ್ವೆ ಮಾಡದೆ ಮನೆಬಿಟ್ಟು ಎಲ್ಲಿಯೋ ಹೋಗಿ ಇಲ್ಲ ಸಲ್ಲದ ಸುಳ್ಳು ಹೇಳಿ ನಮ್ಮ ಮನೆ ಜನರ ಮೇಲೆ ಕೇಸ ಮಾಡಿ ಮತ್ತೆ ತಮ್ಮ ಮನಿಗೆ ಹಣ ಕೇಳಲು ಬಂದಿಯಾ ಅಂತಾ" ಅವಾಚ್ಯವಾಗಿ ಬೈದಿದ್ದು, ಆದ್ದರಿಂದ ಆರೋಪಿತನು **ಭಾರತೀಯ ನ್ಯಾಯ ಸಂಹಿತೆ ಕಲಂ.352** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು

VAIDYA SHREEKANT Digitally signed by VAIDYA SHREEKANT Date: 2026.07.02 17:29:26 +0530

ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ?

**6.** ಮೇಲೆ ಹೇಳಿದಂತೆ ಆರೋಪಿಯು ಚಾಸಾ-1 ರವರಿಗೆ "ಇನ್ನೊಂದು ಸಾರಿ ತಮ್ಮ ಮನೆಗೆ ಬಂದರೆ ನಿನ್ನ ಜೀವ ಸಹಿತ ಬಿಡುವದಿಲ್ಲಾ ಅಂತಾ" ಜೀವ ಬೆದರಿಕೆ ಹಾಕಿದ್ದು, ಆದ್ದರಿಂದ ಆರೋಪಿತನು **ಭಾರತೀಯ ನ್ಯಾಯ ಸಂಹಿತೆ ಕಲಂ.351(2)** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

**7.** ಹಾಗಿದ್ದರೆ ಯಾವ ಆಜ್ಞೆ?

**9**. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆ:-

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ |
| ಅಂಶ-2 | : | ನಕಾರಾತ್ಮಕವಾಗಿ |
| ಅಂಶ-3 | : | ನಕಾರಾತ್ಮಕವಾಗಿ |
| ಅಂಶ-4 | : | ನಕಾರಾತ್ಮಕವಾಗಿ |
| ಅಂಶ-5 | : | ನಕಾರಾತ್ಮಕವಾಗಿ |
| ಅಂಶ-6 | : | ನಕಾರಾತ್ಮಕವಾಗಿ |
| ಅಂಶ-7 | : | ಅಂತಿಮ ಆದೇಶದಂತೆ: |

**-: ಕಾ ರ ಣ ಗ ಳು :-**

**10. ಅಂಶ-1 ರಿಂದ 6:** ಈ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

ಈ ಪ್ರಕರಣದಲ್ಲಿ ಆರೋಪಿತನ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆ ಪರವಾಗಿ ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿ ತನ್ನ ಗಂಡ ಇರುತ್ತಾರೆ. ತಾನು ಆರೋಪಿಯ ಒಡೆತನದ ಮನೆಯಲ್ಲಿ ಬಹಳ ದಿನಗಳಿಂದಲೇ ಬೇರೆಯಾಗಿ ವಾಸ ಮಾಡುತ್ತಿದ್ದು, ತನ್ನ ಮತ್ತು ಆರೋಪಿಯ ನಡುವೆ ಸುಮಾರು 3 ವರ್ಷಗಳಿಂದ ಕೌಟುಂಬಿಕ ವ್ಯಾಜ್ಯಗಳು ಜಾರಿಯಲ್ಲಿದ್ದು, ಈಗ ಎಲ್ಲಾ ಪ್ರಕರಣಗಳಲ್ಲಿಯೂ ತಾವು ರಾಜೀ ಮಾಡಿಕೊಂಡಿದ್ದು, ತಾನು ಮಕ್ಕಳನ್ನು ನೋಡಿಕೊಂಡು ಬರಲು ಮತ್ತು ತನ್ನ ಆಧಾರಕಾರ್ಡ

VAIDYA SHREEKANT
Digitally signed by VAIDYA SHREEKANT
Date: 2026.07.02 17:29:33 +0530

ತರಲು ಆರೋಪಿಯ ಮನಗೆ ಹೋದಾಗ ತನ್ನ ಮತ್ತು ಆರೋಪಿಯ ನಡುವೆ ಬಾಯಿ ಮಾತಿನ ತಕರಾರುಗಳು ಆಗಿರುತ್ತವೆ. ಆರೋಪಿ ತನಗೆ ಯಾವುದೇ ರೀತಿ ಹೊಡೆಬಡೆ ಮಾಡಿರುವುದಿಲ್ಲ, ತನಗೆ ಅವಮಾನ ಆಗುವ ರೀತಿ ವರ್ತನೆ ಮಾಡಿಲ್ಲ, ಯಾವುದೇ ರೀತಿ ದೈಹಿಕ ಹಿಂಸೆ ನೀಡಿಲ್ಲ, ಅವಾಚ್ಯವಾಗಿ ಬೈದಿರುವುದಿಲ್ಲ ಮತ್ತು ಜೀವ ಬೆದರಿಕೆಯನ್ನು ಹಾಕಿರುವುದಿಲ್ಲ. ಆಧಾರ ಕಾರ್ಡ ತರಲು ಹೋದಾಗ ಬಾಯಿ ಮಾತಿನ ತಕರಾರು ಆದ ಬಗ್ಗೆ ಮಾತ್ರ ಪೋಲಿಸರಿಗೆ ತಾನು ತಿಳಿಸಿದ್ದೇನೆ. ಪೋಲಿಸರು ಪಂಚನಾಮೆ ಮಾಡಿರುವ ವಿಷಯ ತನಗೆ ಗೊತ್ತಿಲ್ಲ ಎಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿರುತ್ತಾರೆ. ಆದರೆ ಪಾಟೀ ಸವಾಲಿನಲ್ಲಿ ಸೂಚಿಸಿದ ಎಲ್ಲಾ ಅಂಶಗಳನ್ನು ಸಾಕ್ಷಿದಾರರು ಸಂಪೂರ್ಣವಾಗಿ ನಿರಾಕರಿಸಿರುತ್ತಾರೆ. ಆದ್ದರಿಂದ ಈ ಸಾಕ್ಷಿದಾರರ ಸಾಕ್ಷ್ಯವು ಅಭಿಯೋಜನೆಗೆ ಯಾವುದೇ ಉಪಯೋಗವಿರುವುದಿಲ್ಲ.

**11.** ಮೇಲ್ಕಂಡ ಮೌಖಿಕ ಸಾಕ್ಷದ ಜೊತೆಗೆ ನಿಪಿ.1 ರಿಂದ 4 ರ ದಾಖಲಾತಿಗಳನ್ನು ಅಭಿಯೋಜನೆಯವರು ಹಾಜರುಪಡಿಸಿರುತ್ತಾರೆ. ಪ್ರಾಸಾ.1ರವರು ನೀಡಿರುವ ದೂರಿನ ಹೇಳಿಕೆ ಪ್ರತಿಯನ್ನು ನಿಪಿ-1 ಎಂದು, ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-2 ಎಂದು, ಭಾವಚಿತ್ರಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಗಿರುತ್ತದೆ. ಈ ಸಾಕ್ಷಿದಾರರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸದರಿಯವರು ಅಭಿಯೋಜನೆಯ ಪ್ರಕಾರ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರರಾಗಿದ್ದರೂ ಕೂಡ ಅವರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣವನ್ನು ನಿರಾಕರಿಸಿರುವುದಲ್ಲದೇ ನಿಪಿ-1 ರಿಂದ 4 ರಂತೆ ಹಾಜರುಪಡಿಸಿದ ದಾಖಲೆಗಳ ಎಲ್ಲಾ ಒಳಾಂಶಗಳನ್ನು ಕೂಡ ನಿರಾಕರಿಸಿರುತ್ತಾರೆ. ಈ ಮೇಲೆ ಹೇಳಿದಂತೆ ಅಭಿಯೋಜನೆಯು ಈ ಸಾಕ್ಷಿದಾರರಿಂದ ಯಾವುದೇ ಒಪ್ಪಿಗೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿದರೂ ಕೂಡ ಯಾವುದೇ ಪ್ರಯೋಜನ ಕಂಡುಬಾರದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಿರುವುದಿಲ್ಲ. ಈ ಬಗ್ಗೆ ಅಭಿಯೋಜಕರ ಪ್ರಾರ್ಥನೆಯನ್ನು ನಿರಾಕರಿಸಲಾಗಿರುತ್ತದೆ. ಪ್ರಾಸಾ-1 ರವರ ಸಾಕ್ಷ್ಯದಲ್ಲಿ ಆರೋಪಿತನನ್ನು ಪ್ರಕರಣದಲ್ಲಿ ಅಪರಾಧಕ್ಕೆ ಒಳಪಡಿಸುವ ಯಾವುದೇ ಅಂಶಗಳು ಕಂಡುಬಂದಿರುವುದಿಲ್ಲ. ಆದ್ದರಿಂದ ಕಲಂ.313 ಭಾ.ದಂ.ಪ್ರ.ಸಂ. ಅಡಿಯಲ್ಲಿ ಆರೋಪಿತನಿಂದ ಪಡೆದುಕೊಳ್ಳಬೇಕಾದ ಹೇಳಿಕೆಯಿಂದ ಕೂಡ ವಿನಾಯಿತಿ ಕೊಡಲಾಗಿರುತ್ತದೆ. ಅಲ್ಲದೇ ಪ್ರಾಸಾ-1 ರವರು ತಮ್ಮ ಪಾಟೀಸವಾಲಿನಲ್ಲಿ ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದು ಕೂಡ

VAIDYA SHREEKANT
Digitally signed by VAIDYA SHREEKANT
Date: 2026.07.02 17:29:42 +0530

ಹೇಳಿರುತ್ತಾರೆ. ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನೀಡಿರುವ ದೂರಿಗೆ ಮತ್ತು ಅಭಿಯೋಜನೆಯ ಪ್ರಕರಣದ ಹೇಳಿಕೆಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುವುದರಿಂದ ಆರೋಪಿತನ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ನಿಸ್ಸಂದೇಹವಾಗಿ ಪೂರಕವಾದ ಸಾಕ್ಷ್ಯಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಆರೋಪಿತನು ಬಿಡುಗಡೆ ಹೊಂದಲು ಅರ್ಹರಿರುತ್ತಾನೆಂದು ಅಭಿಪ್ರಾಯಪಟ್ಟು ಮೇಲ್ಕಾಣಿಸಿದ **ಅಂಶ-1 ರಿಂದ 6 ನ್ನು ನಕಾರಾತ್ಮಕ ಅಂತ ಉತ್ತರಿಸಿರುತ್ತೇನೆ.**

**12.** **<u>ಅಂಶ-7</u>:** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

## <u>ಆದೇಶ</u>

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ.271(1) ರಡಿಯಲ್ಲಿ ಯಕ್ತವಾದ ಅಧಿಕಾರ ಚಲಾಯಿಸಿ ಆರೋಪಿತನು ಭಾರತೀಯ ನ್ಯಾಯ ಸಂಹಿತೆ ಕಲಂ.115(2), 118(1), 133, 351(1), 352, 351(2) ರಡಿಯಲ್ಲಿ ಆರೋಪಿಸಲಾದ ಅಪರಾಧಗಳಿಗೆ ನಿರಪರಾಧಿ ಎಂದು ನಿರ್ಣಯಿಸಲಾಗಿದೆ**.**

ಈ ಪ್ರಕರಣದಲ್ಲಿ ಆರೋಪಿ ಮತ್ತು ಆತನ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆಗಳು ದಂ.ಪ್ರ.ಸಂ. ಕಲಂ 437(ಎ)ರ ಪ್ರಕಾರ ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕಃ 2ನೇ ಜುಲೈ 2026 ರಂದು ನಾನು ಉದ್ಘೋಷಿಸಿದ್ದೇನೆ.)

VAIDYA SHREEKANT
Digitally signed by VAIDYA SHREEKANT
Date: 2026.07.02 17:29:51 +0530

**(ವೈದ್ಯ ಶ್ರೀಕಾಂತ್)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಜಮಖಂಡಿ.

**ಅನುಬಂಧ**

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿ ಗಳ ಪಟ್ಟಿಃ-**

ಪ್ರಾ.ಸಾ.1 : ಶ್ರೀಮತಿ ದೀಪಾಲಿ ಗಂಡ ನರೇಂದ್ರ ಜೈನ್.

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

ನಿ.ಪಿ.1 : ದೂರು
ನಿಪಿ.1(ಎ) : ಚಾಸಾ-1 ರವರ ಸಹಿ
ನಿ.ಪಿ.2 : ಘಟನಾ ಸ್ಥಳದ ಪಂಚನಾಮೆ
ನಿಪಿ.2(ಎ) : ಚಾಸಾ-1 ರವರ ಸಹಿ
ನಿ.ಪಿ.3 ಮತ್ತು 4: ಭಾವಚಿತ್ರಗಳು.

**ಆರೋಪಿ/ತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿ ಗಳ ಪಟ್ಟಿಃ-**

- ಇಲ್ಲ -

**ಆರೋಪಿ/ತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-**

- ಇಲ್ಲ -

VAIDYA SHREEKANT
Digitally signed by VAIDYA SHREEKANT
Date: 2026.07.02 17:29:56 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ., ಜಮಖಂಡಿ.